# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ 10-09-2022

## ಬೀದರ ಗ್ರಾಮೀಣ ಪೊಲೀಸ್ ಠಾಣೆ ಯು.ಡಿ.ಆರ್ ನಂ. 08/2022, ಕಲಂ. 174 ಸಿ.ಆರ್.ಪಿ.ಸಿ :-

ದಿನಾಂಕ 08-09-2022 ರಂದು ಫಿರ್ಯಾದಿ ಚೆನ್ನಬಸಪ್ಪಾ ತಂದೆ ಶಂಕ್ರೆಪ್ಪಾ ಮರಜಾಪೂರೆ ವಯ: 55 ವರ್ಷ, ಜಾತಿ: ಲಿಂಗಾಯತ, ಸಾ: ಆಯಾಸಪೂರ ರವರ ಮಗಳಾದ ಶರಣಮ್ಮಾ ಇವಳು ನಿರಡಿಕೆ ಆಗಿದ್ದರಿಂದ ಕಣ್ಣುತಪ್ಪಿ ಹೊಲದಲ್ಲಿ ಬೆಳೆಗೆ ಔಷಧಿ ಹೊಡದ ಕೊಡದಲ್ಲಿದ್ದ ನೀರು ಕುಡಿದಿದ್ದರಿಂದ ಹೊಟ್ಟೆ ನೋವು ಉಂಟಾಗಿದ್ದು ಕೂಡಲೇ ಆಕೆಗೆ ಚಿಕಿತ್ಸೆ ಕುರಿತು ಬೀದರ ಸರಕಾರಿ ಆಸ್ಪತ್ರೆಗೆ ತಂದು ದಾಖಲಿಸಿದಾಗ ಆಕೆಗೆ ಚಿಕಿತ್ಸೆ ಫಲಕಾರಿಯಾಗದೇ ಬೀದರ ಸರಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ, ಅವಳ ಸಾವಿನಲ್ಲಿ ಯಾರ ಮೇಲೆ ಯಾವುದೇ ದೂರು ಇರುವುದಿಲ್ಲ ಅಂತ ಕೊಟ್ಟ ಫಿರ್ಯಾದಿಯವರ ಹೇಳಿಕೆ ಸಾರಾಂಶದ ದಿನಾಂಕ **09-09-2022** ರಂದು ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಜನವಾಡಾ ಪೊಲೀಸ್ ಠಾಣೆ ಯು.ಡಿ.ಆರ್ ಸಂ. 17/2022, ಕಲಂ. 174 ಸಿ.ಆರ್.ಪಿ.ಸಿ :-

ಫಿರ್ಯಾದಿ ಶಾಂತಮ್ಮಾ ಗಂಡ ವಿಶ್ವಾನಾಥ ಜಡಗೆ ವಯ: 45 ವರ್ಷ, ಸಾ: ಯರನಳ್ಳಿ ಗ್ರಾಮ ರವರ ಮಗಳಾದ ರೂಪಾ ವಯ: 22 ವರ್ಷ ಇವಳಿಗೆ ಕಮಠಾಣಾ ಗ್ರಾಮದ ಸಿದ್ದು ತಂದೆ ಸುನೀಲ ಕೊಸಮ ಈತನೊಂದಿಗೆ ದಿನಾಂಕ 26-05-2020 ರಂದು ಮದುವೆ ಮಾಡಿಕೊಟ್ಟಿದ್ದು, ಮಗಳಿಗೆ ಮದುವೆಯಾಗಿ ಎರಡು ವರ್ಷ ಕಳೆದಿದ್ದರೂ ಸಹ ಮಕ್ಕಳಾಗದ ಕಾರಣ ಅವಳು ತನ್ನ ಮನಸ್ಸಿನ ಮೇಲೆ ಪರಿಣಾಮ ಮಾಡಿಕೊಂಡು ದಿನಾಂಕ 08-09-2022 ರಂದು ಫಿರ್ಯಾದಿಯವರ ಯರನಳ್ಳಿ ಗ್ರಾಮದ ಮನೆಯ ಹಿಂದೆ ಹೋಗಿ ಸಾಗುವಾನಿ ಮರಕ್ಕೆ ಧೋತ್ತರದಿಂದ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾಳೆ, ತನ್ನ ಮಗಳ ಸಾವಿನಲ್ಲಿ ಯಾರ ಮೇಲೆ ಯಾವುದೇ ತರಹದ ಸಂಶಯ, ದೂರು ಇರುವುದಿಲ್ಲ ಅಂತ ಕೊಟ್ಟ ಫಿರ್ಯಾದಿಯವರ ಹೇಳಿಕೆ ಸಾರಾಂಶದ ಮೇರೆಗೆ ದಿನಾಂಕ 09-09-2022 ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂ. 148/2022, ಕಲಂ. 32, 34 ಕರ್ನಾಟಕ ಅಬಕಾರಿ ಕಾಯ್ದೆ :-

ದಿನಾಂಕ **08-09-2022** ರಂದು ಭಾಲ್ಕಿ ಅಗ್ನಿಶಾಮಕ ಕ್ರಾಸ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸರಾಯಿ ಮಾರಾಟ ಮಾಡಲು ಸಾಗಾಟ ಮಾಡುತ್ತಿದ್ದಾನೆ ಅಂತ ರಾಜಕುಮಾರ ಪಿ.ಎಸ್.ಐ ಭಾಲ್ಕಿ ನಗರ ಪೊಲೀಸ್ ಠಾಣೆ ರವರಿಗೆ ಖಚಿತ ಮಾಹಿತಿ ಬಂದ ಮೇರೆಗೆ ಪಿಎಸ್ಐ ರವರು ಇಬ್ಬರು ಪಂಚರನ್ನು ಬರಮಾಡಿಕೊಂಡು, ತಮ್ಮ ಸಿಬ್ಬಂದಿಯವರೊಡನೆ ಅಂಬಿಕಾ ಲಾಡ್ಜ ಹತ್ತಿರ ಹೋಗಿ ಮರೆಯಾಗಿ ನಿಂತು ನೋಡಲು ಅಲ್ಲಿ ಆರೋಪಿ ಬಸವರಾಜ ತಂದೆ ವಾಸುದೇವ ಪವಾರ ವಯ: **45** ವರ್ಷ, ಜಾತಿ: ಎಸ್.ಸಿ ಲಮಾಣಿ, ಸಾ: ಬೀರಿ (ಬಿ) ತಾಂಡಾ, ತಾ: ಭಾಲ್ಕಿ ಇತನು ಅಗ್ನಿಶಾಮಕ ಕ್ರಾಸ್ ಹತ್ತಿರ ತನ್ನ ಮುಂದೆ ಒಂದು ಕಾಟನದಲ್ಲಿ ಸರಾಯಿ ಬಾಟಲಗಳು ಇಟ್ಟುಕೊಂಡು ಮಾರಾಟ ಮಾಡಲು ಸಾಗಾಣಿಕೆ ಮಾಡುವ ಕುರಿತು ರೋಡಿನ ಪಕ್ಕದಲ್ಲಿ ವಾಹನದ ದಾರಿ ಕಾಯುತ್ತಾ ನಿಂ ತಿರುವುದನ್ನು ನೋಡಿ ಖಚಿತ ಪಡಿಸಿಕೊಂಡು, ಪಂಚರ ಸಮಕ್ಷಮ ಸದರಿ ಆರೋಪಿತನ ಮೇಲೆ ಸಿಬ್ಬಂದಿಯವರ ಸಹಾಯದಿಂದ ದಾಳಿ ಮಾಡಿ ಹಿಡಿದು ಸರಾಯಿ ಬಾಟಲಗಳು ಎಲ್ಲಿಂದ ತೆಗೆದುಕೊಂಡು ಬಂದಿರುವೆ? ಮತ್ತು ಸರಾಯಿ ಮಾರಾಟ ಮಾಡಲು , ಸಾಗಾಣಿಕೆ ಮಾಡುವ ಕುರಿತು ನಿನ್ನ ಹತ್ತಿರ ಯಾವುದಾದರು ಸರಕಾರದಿಂದ ಅನುಮತಿ ಪತ್ರ ಇದೆಯೇ ? ಅಂತ ವಿಚಾರಿಸಲು ಆತನು ತನ್ನ ಹತ್ತಿರ ಯಾವುದೆ ಪರವಾನಿಗೆ ಪತ್ರ ಇರುವುದಿಲ್ಲಾ ನಾನು ಭಾಲ್ಕಿ ನಗರದಲ್ಲಿರುವ ಸುಂಟೆ ವಾಯಿನ ಶಾಪದಲ್ಲಿ ವಿವೇಕಾನಂದ ಸ್ವಾಮಿ ತಂದೆ ಗುಂಡಯ್ಯಾ ಸ್ವಾಮಿ ಮ್ಯಾ ನೆಜರ್ ರವರಲ್ಲಿ ಖರೀದಿ ಮಾಡಿಕೊಂಡು ಮಾರಾಟ ಮಾಡಲು ಸಾಗಾಣಿಕೆ

ಮಾಡುತ್ತಿದ್ದೇನೆ ಅಂತ ತಿಳಿಸಿದ್ದರಿಂದ ಸದರಿಯವನ ವಶದಲ್ಲಿದ್ದ ಒಂದು ಪುಟ್ಟದ ಕಾಟನದಲ್ಲಿ ಪರಿಶೀಲಿಸಿ ನೊಡಲು ಒಟ್ಟು 90 ಎಂ.ಎಲ್. ವುಳ್ಳ ಒಟ್ಟು 96 ಓರಿಜನಲ್ ಚಾಯಿಸ ವಿಸ್ಕಿ ಸರಾಯಿ ತುಂಬಿದ ಪುಟ್ಟದ ಪೌಚಗಳು ಅ.ಕಿ 3,360/- ರೂ. ಇದ್ದು , ಸದರಿ ಸರಾಯಿ ಪುಟ್ಟದ ಬಾಟಲಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು , ಸದರಿ ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಮೇಹಕರ ಪೊಲೀಸ್ ಠಾಣೆ ಅಪರಾಧ ಸಂ. 75/2022, ಕಲಂ. 457, 380 ಐಪಿಸಿ :-

ದಿನಾಂಕ 08-09-2022 ರಂದು ಫಿರ್ಯಾದಿ ಶಿವಾಜಿ ತಂದೆ ಕಾಶಿರಾಮ ತಾಂಬೋಳೆ, ವಯ 63 ವರ್ಷ, ಜಾತಿ: ಮರಾಠಾ, ಸಾ: ಜಮಖಂಡಿ ರವರು ಹೊಲ್ಕೆ ಹೋಗೆ ಮರಳಿ ಸಾಯಂಕಾಲ ಹೊಲದಿಂದ ಮನೆಗೆ ಬಂದು ಮನೆಯ ಕೀಲಿ ತೆಗೆಯಲು ಹೋದಾಗ ಜೇಬಿನಲ್ಲಿ ಕೀಲಿ ಇರಲಿಲ್ಲ, ಪುನಃ ಹೊಲಕ್ಕೆ ಹೋಗಿ ಹುಡುಕಾಡಲು ಕೀಲಿ ಸಿಗಲಿಲ್ಲ, ಅದಕ್ಕಾಗಿ ರಾತ್ರಿ ತನ್ನ ಅತ್ತೆ ಮಾವನ ಮನೆಯಲ್ಲಿ ಮಲಗಿಕೊಂಡು ದಿನಾಂಕ 09-09-2022 ರಂದು ಮುಂಜಾನೆ ತನ್ನ ಮನೆಗೆ ಹೋಗಿ ನೋಡಲು ಮನೆಯ ಬಾಗಿಲಿನ ಲಾಕ್ ಮುರಿದಿದ್ದು, ಒಳಗಡೆ ಹೋಗಿ ನೋಡಲು ಮನೆಯಲ್ಲಿ ಸಂದೂಕದಲ್ಲಿದ್ದ 05 ಗ್ರಾಂ. ಬಂಗಾರದ 03 ಉಂಗುರಗಳು ಅ.ಕಿ 75,000/- ರೂ., ಒಂದು 10 ಗ್ರಾಂ ನ ಬಂಗಾರದ ಲಾಕೇಟ್ ಅ.ಕಿ 50,000/- ರೂ. & ಅರ್ಧ ಗ್ರಾಂ ಬಂಗಾರದ ಚಿಕ್ಕ ಮಕ್ಕಳ 08 ಉಂಗುರಗಳು, ಹೀಗೆ ಒಟ್ಟು 1,45,000/- ರೂ., ಬೆಲೆ ಬಾಳುವ ಬಂಗಾರದ ಆಭರಣನಗಳನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆಂದು ಕೊಟ್ಟ ಫಿರ್ಯಾದಿಯವರ ದೂರಿನ ಹೇಳಿಕೆ ಸಾರಾಂಶದ ಮೇರೆಗೆ ದಿನಾಂಕ 09-09-2022 ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.